ಜೆಎಸ್‌ಎಸ್ ಮಹಾವಿದ್ಯಾಪೀಠ

**ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು**

ಪ್ರಚ್ಛನ್ನ ಉತ್ಕೃಷ್ಟತಾ ಕಾಲೇಜು ಎಂದು ಯುಜಿಸಿಯಿಂದ ಗುರುತಿಸಲ್ಪಟ್ಟಿದೆ
(ಮೈಸೂರು ವಿಶ್ವವಿದ್ಯಾನಿಲಯದಿಂದ ಸ್ವಾಯತ್ತತೆ ಪಡೆದಿದೆ * ನ್ಯಾಕ್‌ನಿಂದ 'ಎ' ದರ್ಜೆ ಮಾನ್ಯತೆ ಪಡೆದಿದೆ)

ESTD - 1964

ಊಟಿರಸ್ತೆ, ಮೈಸೂರು-೫೭೦ ೦೨೫

☎ 0821-2548236 & 2548380 Fax: 0821-2548238 E-mail: jssautonomous@gmail.com

ಪ್ರಕಟಣೆಯ ಕೃಪೆಗಾಗಿ

## ಅಕ್ಷರ ಹೃದಯಕ್ಕೆ ಬಿದ್ದಾಗ ಮಾತ್ರ ಸಮಾನತೆಯ ಸಮಾಜದ ನಿರ್ಮಾಣ ಸಾಧ್ಯ

**-ಡಾ. ಮಲ್ಲಿಗಹಳ್ಳಿ ನರೇಂದ್ರಕುಮಾರ್**

'ಸಮಾಜಕ್ಕೆ ಸ್ಪಂದಿಸುವುದು, ಪ್ರತಿಕ್ರಿಯೆ ನೀಡುವುದು ಸಾಹಿತಿಯಾದವನ ಕರ್ತವ್ಯ. ಸಾಹಿತ್ಯದ ಸಾರ್ಥಕತೆಯು ಸಮಾಜಕ್ಕೆ ಸ್ಪಂದಿಸುವುದರಲ್ಲೇ ಅಡಗಿರುವುದು. ಸಾಹಿತ್ಯಕ್ಕೆ ಎಲ್ಲಾ ಕ್ಷೇತ್ರಗಳ ಜೊತೆ ಒಡನಾಟ ಇರುತ್ತದೆ. ಅಂತಹ ಒಡನಾಟದಿಂದ ಬರುವ ಅರಿವಿನಿಂದ ಸಮಾನತೆಯ ಸಮಾಜದ ನಿರ್ಮಾಣ ಸಾಧ್ಯ. ಆದ್ದರಿಂದ ಸಾಹಿತ್ಯದ ಮತ್ತು ಸಾಹಿತಿಯಾದವನ ಜವಾಬ್ದಾರಿ ಹೆಚ್ಚಿರುತ್ತದೆ' ಎಂದು ಡಾ. ಬಿ.ಆರ್. ಅಂಬೇಡ್ಕರ್ ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ಸಂಯೋಜನಾಧಿಕಾರಿಗಳಾದ ಡಾ. ಎಸ್. ನರೇಂದ್ರಕುಮಾರ್ ಅವರು ಹೇಳಿದರು.

ಮೈಸೂರಿನ ಊಟಿ ರಸ್ತೆಯಲ್ಲಿರುವ ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜಿನ ಕನ್ನಡ ಸ್ನಾತಕೋತ್ತರ ವಿಭಾಗದಲ್ಲಿ ಏರ್ಪಡಿಸಿದ್ದ 'ನನ್ನ ನೋಟದಲ್ಲಿ ದೇವನೂರು ಮಹಾದೇವ ಅವರ ಎದೆಗೆ ಬಿದ್ದ ಅಕ್ಷರ' ವಿದ್ಯಾರ್ಥಿ ಕೇಂದ್ರಿತ ವಿಚಾರ ಸಂಕಿರಣದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿ ಮಾತನಾಡುತ್ತಿದ್ದರು. 'ಮೆದುಳಿಗೆ ಬೀಳುವ ಅಕ್ಷರ ಬೌದ್ಧಿಕ ಬೆಳವಣಿಗೆಯನ್ನು ಉಂಟುಮಾಡಬಹುದು ಆದರೆ ಅಕ್ಷರ ಎದೆಗೆ ಬಿದ್ದಾಗ ಮಾನವೀಯತೆಯ, ಸಮಾನತೆಯ ಸಮಾಜವನ್ನು ನಿರ್ಮಿಸಲು ಸಾಧ್ಯ. ಜಾತಿಯ ವಿಷಯದಲ್ಲಿ ಮೇಲರಿಮೆ ಮತ್ತು ಕೀಳರಿಮೆ ಎರಡೂ ಸಮಾಜಕ್ಕೆ ಅಪಾಯಕಾರಿ. ಆದ್ದರಿಂದ 'ದೇವನೂರು ಮಹಾದೇವ' ಅವರ 'ಎದೆಗೆ ಬಿದ್ದ ಅಕ್ಷರ' ಕೃತಿ ಸಮಾನತೆಯ ಸಮಾಜದ ಆಶಯವನ್ನು ಹೊತ್ತು ನಿಂತಿದೆ' ಎಂದು ಹೇಳಿದರು.

ವಿಚಾರಗೋಷ್ಠಿಯ ಅಧ್ಯಕ್ಷತೆ ವಹಿಸಿದ್ದ ವಿಭಾಗದ ಮುಖ್ಯಸ್ಥರಾದ ಡಾ. ಎಚ್. ಟಿ. ಶೈಲಜ ಅವರು ಎದೆಗೆ ಬಿದ್ದ ಅಕ್ಷರದ ಕೃತಿಯು ವಚನ ಸಾಹಿತ್ಯದಂತೆಯೇ ಇದೆ. ಎರಡರ ಉದ್ದೇಶ ಒಂದೇ ಆಗಿದೆ. ವಚನ ಸಾಹಿತ್ಯವೂ ಸಮಾಜದಲ್ಲಿ ಸಮಾನತೆಯ ನಿರ್ಮಾಣಕ್ಕಾಗಿ ರಚನೆಯಾದದ್ದು, ಅಂತೆಯೆ ಎದೆಗೆ ಬಿದ್ದ ಅಕ್ಷರವೂ ಸಮಾನತೆಯ ಸದಾಶಯವನ್ನು ಒಳಗೊಂಡಿದೆ. ವಚನ ಸಾಹಿತ್ಯವನ್ನು ಸಾಹಿತ್ಯದ ಯಾವ ಪ್ರಕಾರಕ್ಕೂ ಸೇರಿಸಲು ಸಾಧ್ಯವಿಲ್ಲದಿರುವಂತೆ, ದೇವನೂರು ಮಹಾದೇವ ಅವರ ಎದೆಗೆ ಬಿದ್ದ ಅಕ್ಷರವೂ ಸಾಹಿತ್ಯದ ಯಾವ ಪ್ರಕಾರಕ್ಕೂ ಸೇರಿಲ್ಲದೆ ಭಿನ್ನವಾಗಿದೆ' ಎಂದು ಹೇಳಿದರು.

ದ್ವಿತೀಯ ಎಂ.ಎ. ವಿದ್ಯಾರ್ಥಿಯಾದ ಕು. ಎನ್.ಪಿ. ಮಹಾಲಕ್ಷ್ಮಿ ಪ್ರಬಂಧವನ್ನು ಮಂಡಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಬಿ. ಪ್ರಭುಸ್ವಾಮಿ ಕಟ್ಟವಾಡಿ ಸ್ವಾಗತಿಸಿದರು. ವಿದ್ಯಾರ್ಥಿ ಮಲ್ಲಿಕಾರ್ಜುನ ಪ್ರಾರ್ಥಿಸಿದರು. ಗುರುರಾಜ್ ವಂದಿಸಿದರು. ಸಹಾಯಕ ಪ್ರಾಧ್ಯಾಪಕರಾದ ಡಾ. ಬಿ.ಎಸ್.ಸುದೀಪ್ ಅವರು ನಿರೂಪಿಸಿದರು.

M.B. Mallikarjunaswamy

ಪ್ರಾಂಶುಪಾಲರು
ಜೆಎಸ್‌ಎಸ್ ಕಲಾ, ವಾಣಿಜ್ಯ ಮತ್ತು ವಿಜ್ಞಾನ ಕಾಲೇಜು
(ಸ್ವಾಯತ್ತ)
ಊಟಿ ರಸ್ತೆ, ಮೈಸೂರು-570 025.

ಗೆ,

____________________

____________________